
ನಾನೂ ಅಲ್ಲಿದ್ದೆ ಭಗವಂತನೇ ಕೊಟ್ಟ ಪ್ರಸಾದವೆಂದು ತಿಳಿದು ಮಂದಿರ ಕಟ್ಟಿಸಿ ಮೂರ್ತಿ ಪ್ರತಿಷ್ಠಾಪನೆ ಮಾಡಿಸಿದರು.

ಅವರ ಸೆರೆವಾಸ ಕಾಲದಲ್ಲೂ ಲಕ್ಷ್ಮಕ್ಕ ಮತ್ತು ನಾನು ಆಶ್ರಮದಲ್ಲಿ ಉಳಿದು ಅಲ್ಲಿಯ ಚಟುವಟಿಕೆಗಳನ್ನು ಮುಂದುವರಿಸಿದೆವು. ವಿನೋಬಾ ಹಳ್ಳಿ ಹಳ್ಳಿಗೆ ತಿರುಗಿ ದೀನದಲಿತರ ಉತ್ತಮ ಜೀವನ, ಏಳಿಗೆಗಾಗಿ ಶ್ರಮಿಸುತ್ತ ಹೊರಟ ಅಪರೂಪದ ಪ್ರಯೋಗದಲ್ಲೂ ಅವರ ಜೊತೆ ಇದ್ದೆವು.

ಎಷ್ಟೋ ಸಲ ದಿಗ್ಭ್ರಮೆಯಾಗುತ್ತಿತ್ತು– 'ನಮಗೇನು ಬೇಕು ಮತ್ತು ನಾವೇನು ಮಾಡುತ್ತಿದ್ದೇವೆ? ಈ ಸ್ವಾತಂತ್ರ್ಯ ಹೋರಾಟಕ್ಕಾಗಿ ನಮ್ಮ ಭೂಮಿಯೇ ನಮ್ಮನ್ನು ಬಿಟ್ಟು ಹೋಯಿತು. ನಾನೇ ನಿರ್ಗತಿಕ. ಆದರೂ ನನಗಿಂತ ಬಡವರಿಗಾಗಿ ಯಾಚಿಸುತ್ತಿದ್ದೇನೆ. ವಿನೋಬಾ ಆಶ್ರಮದಲ್ಲಿ, ಅವರ ಸಹವಾಸದಲ್ಲಿ ಇದ್ದ ವರ್ಷಗಳು ನನ್ನ ಪಾಲಿನ ಅಮೃತವರ್ಷಗಳೆಂದು ತಿಳಿಯುತ್ತೇನೆ. ವಿನೋಬಾ ತುಂಬಾ ದೊಡ್ಡ ವಿದ್ವಾಂಸರೂ ಹೌದು. ಅವರು ಹೇಳುತ್ತಿದ್ದ ಎಲ್ಲ ಸಂಗತಿಗಳೂ ನನಗರ್ಥವಾಗುತ್ತಿದ್ದವು ಎಂದು ಹೇಳಲಾರೆ. ಆದರೆ, ತನ್ನ ನಡೆಯಿಂದಲೂ ಬಹಳ ದೊಡ್ಡ ಮನುಷ್ಯ.



ಅದನ್ನು ನನ್ನ ಜೀವನದಲ್ಲಿ ರೂಢಿಸಿಕೊಳ್ಳಲು ಪ್ರಯತ್ನ ಮಾಡಿದ್ದೇನೆ.

ಒಂದು ಸಲ ಅವರು ನನಗೆ ಹೇಳಿದರು: "ಗೋಪಾಲ, ಓದು ಬರಹ ನಿನ್ನ ಸ್ವಭಾವದಲ್ಲಿಲ್ಲ. ತೊಂದರೆ ಏನೂ ಇಲ್ಲ. ಆದರೆ, ಪ್ರಪಂಚವನ್ನು ಮುಕ್ತ ಮನಸ್ಸಿನಿಂದ ಗಮನಿಸುತ್ತಾ ಹೋಗು. ಮಥಿಸುತ್ತಾ ಹೋಗು. ಅದೂ ಶಿಕ್ಷಣವೇ, ಅದೂ ಮಾಗುವ ಪರಿಯೇ.

ನಾನು ಮದುವೆಯಾಗದಿದ್ದುದರ ಹಿಂದೆ ದೊಡ್ಡ ಆದರ್ಶವೇನೂ ಇಲ್ಲ. ಯಾರೂ ಹೆಣ್ಣು ಕೊಡಲಿಲ್ಲ, ಮದುವೆಯಾಗಲಿಲ್ಲ. ಆದರೆ, ಆಶ್ರಮದಲ್ಲಿ ಕಲಿತ ಯೋಗ, ಪ್ರಾಣಾಯಾಮ, ಸಂತರ ದರ್ಶನ ಇವೆಲ್ಲ ನನ್ನ ಮೇಲೆ ಪ್ರಭಾವ ಬೀರಿದವು. ನಾನು ಏಕಾಂಗಿಯಾಗಿಯೇ ಉಳಿಯುವುದು ಒಳ್ಳೆಯದೆಂದು ನಿಶ್ಚಯಿಸಿದೆ. ವಿನೋಬಾ ಆಶ್ರಮದಲ್ಲಿ ತೀರಾ ದೀರ್ಘಕಾಲ ಉಳಿಯಬೇಕೆಂದು ಅನಿಸಲಿಲ್ಲ. ನನ್ನ ಅಣ್ಣ ಬಹಳ ಹಿಂದೆಯೇ ಊರಿಗೆ ವಾಪಸು ಬಂದಿದ್ದ. ನಾನೂ ಈ ಹಳ್ಳಿಗೆ ಬಂದು ಮುಟ್ಟಿದೆ. ನನ್ನ ಅಜ್ಜಿಮನೆ ಊರು ಇದು. ಸಂಬಂಧಿಕರೊಬ್ಬರು ನಾನು ಬದುಕಿರುವವರೆಗೂ ಉಳಿದುಕೊಳ್ಳಲೆಂದು ಕೊಟ್ಟಿರುವ ಜಾಗ ಇದು. ಅಂದರೆ, ಈ ಭೂಮಿಯ ಮೇಲೆ ನಾನೊಬ್ಬ ಆಗಂತುಕ, ಅತಿಥಿಯಂತೆ ಬದುಕುತ್ತಿದ್ದೇನೆ. ಅಷ್ಟೆ, ಭವ ಕಳಚಿತೆಂದರೆ ಏನೂ ಇಲ್ಲ, ಏನೂ ಇಲ್ಲ ಎಂದರೆ ಏನೂ ಇಲ್ಲ."

ಮಾತು ಒಮ್ಮೆಲೇ ಹೀಗೆ ಹೊರಳಿದ್ದು ನೋಡಿ ವೇದನೆಯಾಯಿತು. "ಹಾಗೇಕೆ ಹೇಳುತ್ತೀರಿ ಶಾಸ್ತ್ರಿಯವರೇ, ಹಾಗೆ ನೋಡಿದರೆ ಎಲ್ಲರೂ ಹೋಗಲು ಬಂದವರೇ ಅಲ್ಲವೇ, ಇಲ್ಲೇ ಇರುವವರಾರು?" ಎಂದೆ.

"ನನ್ನ ಸಮಾಧಾನಕ್ಕೆ ಹಾಗೆ ಹೇಳುತ್ತಿದ್ದೀರಿ, ಸಂತೋಷ. ತಪ್ಪೇನೂ ಇಲ್ಲ. ಸರಿಯಾಗಿಯೇ ಇದೆ ನಿಮ್ಮ ಮಾತು. ಆದರೆ, ನನ್ನ ಬಾಳಿನ ಅವಲೋಕನ ಮಾಡಿಕೊಳ್ಳುತ್ತಾ